# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ಶೂನ್ಯವೇಳೆಯಲ್ಲಿ "ಕೋಲಾರ ಜಿಲ್ಲಾ ಕೇಂದ್ರದ ಶ್ರೀ ನರಸಿಂಹರಾಜ (ಎಸ್.ಎನ್ ಆರ್) ಆಸ್ಪತ್ರೆಗೆ ಬರುವವರು ಕೈಯಲ್ಲಿ ನೀರಿನ ಬಾಟಲು ಹಿಡಿದು ಬರುವ ಪರಿಸ್ಥಿತಿ ನಿರ್ಮಾಣವಾಗಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ಸಿಗುವ ಚಿಕಿತ್ಸೆ ಉಚಿತವಾದರೂ ಅಲ್ಲಿ ಚಿಕಿತ್ಸೆಗೆಂದು ದಾಖಲಾಗುವ ರೋಗಿಗಳು ನೀರಿಗಾಗಿ ನಿತ್ಯ ನೂರಾರು ರೂಪಾಯಿ ಖರ್ಚು ಮಾಡುವಂತಹ ಪರಿಸ್ಥಿತಿಯಿದ್ದು, ಜಿಲ್ಲಾ ಆಸ್ಪತ್ರೆಗೆ ಆರೋಗ್ಯ ಅಧಿಕಾರಿ, ಸ್ಥಳೀಯ ಶಾಸಕರು ಭೇಟಿ ನೀಡಿ ಪರಿಶೀಲಿಸಿದರೂ ಪರಿಸ್ಥಿತಿ ಮಾತ್ರ ಸುಧಾರಿಸದಿರುವುದು ಜಿಲ್ಲಾಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ. ಖಾಸಗಿ ಆಸ್ಪತ್ರೆಗಳಿಗೆ ಹೋಗಲು ಶಕ್ತಿಯಿಲ್ಲದಂತಹ ಬಡವರು ಬರುವಂತಹ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತಿದ್ದರೂ, ಮೂಲ ಸೌಕರ್ಯಗಳ ಕೊರತೆಯಿಂದಾಗಿ ಜನರು ನರಕ ಅನುಭವಿಸುವಂತಾಗಿದೆ. ಪರಿಣಾಮ, ರೋಗಿಗಳು ಹಾಗೂ ಬಾಣಂತಿಯರಿಗೆ ತೀವ್ರ ತೊಂದರೆ ಎದುರಾಗಿದ್ದು, ರೋಗಿಗಳ ಸಂಬಂಧಿಕರು ಕೈಯಲ್ಲಿ ನೀರಿನ ಬಾಟಲಿಗಳನ್ನು ಹಿಡಿದು ಓಡಾಡುವಂತಾಗಿದೆ. ಆಸ್ಪತ್ರೆಯಲ್ಲಿ ಸೂಕ್ತ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ರೋಗಿಗಳು ಪರದಾಡುವಂತಹ ಪರಿಸ್ಥಿತಿ ಇದ್ದರೆ, ಇತ್ತ ರೋಗಿಗಳ ಸಂಬಂಧಿಕರು ಮಲ-ಮೂತ್ರ ವಿಸರ್ಜನೆಗೆ ಬಯಲಿಗೆ ಹೋಗುವಂತಹ ಹೀನಾಯ ಪರಿಸ್ಥಿತಿ ಜಿಲ್ಲಾಡಳಿತಕ್ಕೆ ನಾಚಿಕೆಗೇಡಿನ ಸಂಗತಿಯಾಗಿದೆ.

ಜಿಲ್ಲೆಗೆ ಬರುವಂತಹ ರಾಜಕಾರಣಿಗಳು, ಹಿರಿಯ ಅಧಿಕಾರಿಗಳು ಹಾಗೂ ಆರೋಗ್ಯ ಸಚಿವರು ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡುತ್ತಾರೆ. ಆದರೆ ಜಿಲ್ಲಾ ಆಸ್ಪತ್ರೆಯಲ್ಲಿನ ಸಮಸ್ಯೆಗಳು ಅವರ ಗಮನಕ್ಕೆ ಬರಲಿಲ್ಲವಾ? ಅಥವಾ ಸಮಸ್ಯೆಗಳು ಅವರ ಗಮನಕ್ಕೆ ಬರದಂತೆ ಆಸ್ಪತ್ರೆ ಅಧಿಕಾರಿಗಳು ನೋಡಿಕೊಂಡರಾ? ಎಂಬ ಸಂಶಯ ಮೂಡಿದೆ. ಜಿಲ್ಲಾ ಆಸ್ಪತ್ರೆಗೆ ಹೊಂದಿಕೊಂಡಿರುವಂತಹ ವೈದ್ಯರ ವಸತಿ ಸಂಕೀರ್ಣದಲ್ಲಿಯೂ ಪರಿಸ್ಥಿತಿ ಭಿನ್ನವಾಗಿಲ್ಲ. ಸರಕಾರಿ ವೈದ್ಯರ ಮನೆ ಸೇವೆಗಾಗಿ ಪ್ರತಿ ತಿಂಗಳ ವೇತನದಲ್ಲಿ ಎಚ್.ಆರ್.ಪಿ ಕಡಿತಗೊಳಿಸಲಾಗುತ್ತದೆ. ಆದರೆ ನೀರು ಚರಂಡಿ ವ್ಯವಸ್ಥೆಯಿಲ್ಲದೆ ಪರದಾಡುವಂತಾಗಿದೆ.

ಆಸ್ಪತ್ರೆಯಲ್ಲಿ ಎರಡರಿಂದ ಮೂರು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಆದರೆ ಕೊರೆದಿರುವ ಕೊಳವೆ ಬಾವಿಗಳು ಕೆಟ್ಟು ನಿಂತಿದ್ದು, ಕೆಲವು ಬಾವಿಗಳಲ್ಲಿ ಮಣ್ಣು ಮಿಶ್ರಿತ ನೀರು ಬರುತ್ತಿದೆ. ಈ ನಡುವೆ ನಗರ ಸಭೆಯಿಂದ ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುತ್ತಿದ್ದರೂ ನೀರಿನ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ ಎನ್ನುವುದು ಸಂಶಯದ ವಿಷಯವಾಗಿದೆ. ಆಸ್ಪತ್ರೆಯ ಅವ್ಯವಸ್ಥೆಗಳನ್ನು ಲಾಭ ಮಾಡಿಕೊಳ್ಳುವ ದಂಧೆಯೊಂದು ಶುರುವಾಗಿದ್ದು, ಬಾಣಂತಿಯರಿಗೆ ಬಿಸಿ ನೀರು ಪೂರೈಸಲು ನೂರಾರು ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಈ ವಿಷಯವು ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ಮಹತ್ವದಾಗಿರುತ್ತದೆ" ಎಂಬ ಪ್ರಸ್ತಾಪಕ್ಕೆ:-

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-

ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ ಇಲ್ಲಿ ಹಳೇ ಕಟ್ಟಡದ ಆಸ್ಪತ್ರೆ ಮತ್ತು ತಾಯಿ ಮಕ್ಕಳ ಆಸ್ಪತ್ರೆ ಕಟ್ಟಡ ಇದ್ದು, ಎರಡೂ ಕಟ್ಟಡಗಳಿಗೆ 100 LTR SS TANK (50 LTR HOT & 50 LTR WARM WATER) SS TANK RO PLANT SYSTEM ಸೇರಿದಂತೆ ಆಸ್ಪತ್ರೆಯಲ್ಲಿ ಒಟ್ಟು 07

Scanned with OKEN Scanner

ಆರ್.ಓ ಘಟಕಗಳನ್ನು ಸಾರ್ವಜನಿಕರ ಮತ್ತು ರೋಗಿಗಳ ಉಪಯೋಗಕ್ಕೆ ಬಳಸಲಾಗುತ್ತಿದೆ ಹಾಗೂ 1000 ಲೀಟರ್‌ನ ಎರಡು ದೊಡ್ಡ ಆರ್.ಓ ಘಟಕಗಳಿದ್ದು, 25 ಲೀಟರ್ ಸಾಮರ್ಥ್ಯವುಳ್ಳ ನಾಲ್ಕು ವಾಟರ್ ಡಿಸ್‌ಫೆನ್ಸರ್ ಅನ್ನು ಸ್ಥಾಪನೆ ಮಾಡಿದ್ದು, ಇವೆರಡನ್ನೂ ಕುಡಿಯುವ ನೀರಿಗಾಗಿ ಬಳಕೆ ಮಾಡಲಾಗುತ್ತಿದೆ. ಪ್ರಸ್ತುತ ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆಯ ಹಳೇ ಕಟ್ಟಡ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಎಲ್ಲಾ ಮಹಡಿಗಳಲ್ಲೂ ಹಾಗೂ ವಾರ್ಡ್‌ಗಳಲ್ಲಿಯೂ ಶೌಚಾಲಯದ ಸೌಲಭ್ಯ ಇರುತ್ತದೆ. ಆಸ್ಪತ್ರೆಯ ಆವರಣದಲ್ಲಿ ನಗರಸಭೆ ವತಿಯಿಂದ ನಿರ್ಮಿಸಲ್ಪಟ್ಟಿರುವ ಸಾರ್ವಜನಿಕ ಶೌಚಾಲಯ ವ್ಯವಸ್ಥೆ ಹಾಗೂ ಆಸ್ಪತ್ರೆಯ ನೆಲಮಹಡಿಯಲ್ಲಿ ಸಾಮಾನ್ಯ ಶೌಚಾಲಯಗಳನ್ನು ರೋಗಿಗಳ ಸಂಬಂಧಿಕರು ಬಳಕೆ ಮಾಡುತ್ತಿರುತ್ತಾರೆ.

ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆಗೆ ಹೊಂದಿಕೊಂಡಂತೆ ಒಟ್ಟು 13 ವೈದ್ಯರ ವಸತಿಗೃಹಗಳು ಇದ್ದು, ವಸತಿಗೃಹಗಳಿಗೆ ನೀರು ಸರಬರಾಜು ಮಾಡುವ ಬೋರ್‌ವೆಲ್ ದುರಸ್ಥಿಯಲ್ಲಿದ್ದು ಆಸ್ಪತ್ರೆಯ ಆವರಣದಲ್ಲಿರುವ ಒಂದು ಬೋರ್‌ವೆಲ್‌ನಿಂದ ತಾತ್ಕಾಲಿಕವಾಗಿ ನೀರಿನ ವ್ಯವಸ್ಥೆ ಮಾಡಲಾಗಿರುತ್ತದೆ. ವಸತಿ ಗೃಹಗಳ ಕಡೆ ಚರಂಡಿ ವ್ಯವಸ್ಥೆ ಇದ್ದು, ಚರಂಡಿಯು ಸಿಮೆಂಟ್ ಹಾಸಿನಿಂದ ಮುಚ್ಚಲ್ಪಟ್ಟಿರುತ್ತದೆ. ಸಮರ್ಪಕವಾದ ಚರಂಡಿ ನಿರ್ಮಾಣದ ಕುರಿತು ಸಹಾಯಕ ಕಾರ್ಯಪಾಲಕ ಅಭಿಯಂತರರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಂಜನಿಯರಿಂಗ್ ಉಪ ವಿಭಾಗ ಕೋಲಾರ ಇವರಿಗೆ ಸೂಚಿಸಲಾಗಿದೆ. ವೈದ್ಯರ/ಸಿಬ್ಬಂದಿಗಳ ವಸತಿ ಗೃಹಗಳ ದುರಸ್ಥಿ ಮಾಡಲು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಕೋಲಾರ ಇವರಿಗೆ ಸೂಚಿಸಲಾಗಿದೆ.

ಆಸ್ಪತ್ರೆಯ ಆವರಣದ ಪ್ಯಾರಾಮಡಿಕಲ್ ಕಾಲೇಜಿನ ಬಳಿ ದುರಸ್ಥಿಯಲ್ಲಿದ್ದ ಬೋರ್‌ವೆಲ್ ಪೈಪಿನಲ್ಲಿ ತುಂಬಿರುವ ಮಣ್ಣನ್ನು ಹೊರತೆಗೆದಿರುವುದರಿಂದ (ಫ್ಲಶ್ ಮಾಡಿರುತ್ತಾರೆ) ಪ್ರಸ್ತುತ ಒಂದೂವರೆ ಇಂಚು ನೀರು ಬರುತ್ತಿದ್ದು, ಒಂದು ಗಂಟೆಯ ನಂತರ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಒಂದೊಂದು ಗಂಟೆಯ ನಂತರ ನೀರಿನ ಪ್ರಮಾಣ ಪರೀಕ್ಷಿಸಿಕೊಂಡು ನೀರಿನ ಬಳಕೆ ಮಾಡಲಾಗುತ್ತಿದೆ. ನೀರಿನ ಸಮಸ್ಯೆಗೆ ಜಿಲ್ಲಾಧಿಕಾರಿಗಳ ಆದೇಶದಂತೆ ನಗರಸಭೆ ವತಿಯಿಂದ ಪ್ರತಿದಿನ ಟ್ಯಾಂಕರ್ ಮೂಲಕ ನೀರು ಸರಬರಾಜು ವ್ಯವಸ್ಥೆ ಮಾಡಿಕೊಳ್ಳಲಾಗಿರುತ್ತದೆ. ಹೆಚ್ಚಿನ ನೀರಿನ ಅವಶ್ಯಕತೆಗನುಗುಣವಾಗಿ ಆರೋಗ್ಯ ರಕ್ಷಾ ಸಮಿತಿ ಅನುದಾನದಿಂದ ಖಾಸಗಿ ಟ್ಯಾಂಕರ್ ಮೂಲಕ ನೀರಿನ ವ್ಯವಸ್ಥೆ ಮಾಡಿಕೊಳ್ಳಲಾಗಿರುತ್ತದೆ.

ಆಸ್ಪತ್ರೆಯಲ್ಲಿ ಶಾಶ್ವತ ನೀರಿನ ಸಮಸ್ಯೆ ನಿವಾರಣೆ ಮಾಡಲು ಆಸ್ಪತ್ರೆಯ ಪಕ್ಕದಲ್ಲಿ ಹಾದು ಹೋಗಿರುವ ಯರಗೋಳ್ ನೀರು ಸರಬರಾಜು ಪೈಪಿನಿಂದ ಆಸ್ಪತ್ರೆಗ ಸಂಪರ್ಕ ನೀಡಲು ಆಯುಕ್ತರು ನಗರಸಭೆ ಕೋಲಾರ ಇವರಿಗೆ ತಿಳಿಸಲಾಗಿದೆ. ಆಸ್ಪತ್ರೆಯ ಆವರಣದಲ್ಲಿ ನೀರಿನ ದಾಸ್ತಾನು ಮಾಡಲು 150 ಕಿ.ಲೀ ಇಂದ 200 ಕಿ.ಲೀ ಸಾಮರ್ಥ್ಯವಿರುವ ಸ್ಟೋರೇಜ್ ಸಂಪನ್ನು ನಿರ್ಮಸಿಕೊಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಂಜನಿಯರಿಂಗ್ ಉಪ ವಿಭಾಗ ಕೋಲಾರ ಇವರಿಗೆ ಸೂಚಿಸಲಾಗಿದೆ. ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡದಲ್ಲಿ ಬಾಣಂತಿಯರಿಗೆ ಬಿಸಿ ನೀರು ಉಪಯೋಗಕ್ಕೆ ಗೀಸರ್ ಅಳವಡಿಸಿದೆ. ಹಾಗೂ ಕುಡಿಯಲು ಆರ್.ಓ ಘಟಕದ ಮೂಲಕ ಬಿಸಿ ನೀರಿನ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

**ಕಡತ ಸಂಖ್ಯೆ: ಆಕುಕ / ಶೂನ್ಯವೇಳೆ (ಎಸ್.ಎನ್.ಆರ್)/2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner